ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 1, March-April 2024, Pp. 107-117
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ವಿಜಯನಗರ ಜಿಲ್ಲೆಯ ಶಾಸನೋಕ್ತ ಸ್ತ್ರೀಯರು

**ಮಂಜುಳ**

ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**Abstract:**

*ವಿಜಯನಗರ ಜಿಲ್ಲೆಯಲ್ಲಿ ಪ್ರಾಗಿತಿಹಾಸ ಕಾಲದ ಸಾಕಷ್ಟು ಕುರುಹುಗಳು ದೊರೆಯುತ್ತವೆ. ಈ ಪ್ರದೇಶವು ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಕಮ್ಮಟದುರ್ಗದ ಅರಸರು, ವಿಜಯನಗರದ ಅರಸರು ಹಾಗೂ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಈ ರಾಜಮನೆತನಗಳು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅನೇಕ ಕೊಡುಗೆಗಳನ್ನು ನೀಡಿವೆ. ಚಾರಿತ್ರಿಕ ಕಾಲಘಟ್ಟದಲ್ಲಿ ನಿರ್ಮಾಣವಾದಂತಹ ಶಾಸನಗಳು, ದೇವಾಲಯಗಳು, ಕೆರೆ–ಬಾವಿಗಳು, ಸ್ಮಾರಕ ಶಿಲ್ಪಗಳು ಇಂತಹವುಗಳ ಮೂಲಕ ಅಂದಿನ ಕಾಲದ ಸ್ಥಿತಿಗತಿಗಳನ್ನು ಅರಿಯಬಹುದು. ಪ್ರಸ್ತುತ ವಿಷಯವು ವಿಜಯನಗರ ಜಿಲ್ಲೆಯ ಶಾಸನೋಕ್ತ ಸ್ತ್ರೀಯರು ಆಗಿದ್ದು, ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲಘಟ್ಟದಿಂದ ಆಳ್ವಿಕೆ ಮಾಡಿದಂತಹ ರಾಜಮನೆತನಗಳ ಕಾಲದ ಶಾಸನಗಳಲ್ಲಿ ಸ್ತ್ರೀಯರ ಸಾಧನೆಗಳು ಹಾಗೂ ಅವರ ಸ್ಥಾನಮಾನಗಳನ್ನು ಗುರುತಿಸುವುದಾಗಿದೆ. ನಮ್ಮ ನಾಡಿನ ಇತಿಹಾಸವನ್ನು ಕಟ್ಟುವ ಸಂದರ್ಭದಲ್ಲಿ ಐತಿಹಾಸಿಕ ಕಾಲದ ಆಧಾರಗಳಾದ ಶಾಸನ, ಸಾಹಿತ್ಯ ಹಾಗೂ ಶಿಲ್ಪಗಳಲ್ಲಿ ಪುರುಷ ಕೇಂದ್ರಿತವಾದ ರಾಜ ಪ್ರಭುತ್ವವನ್ನು ಹೆಚ್ಚಾಗಿ ಕಾಣುತ್ತೇವೆ. ಆದರೂ ಸಹ ಪುರುಷ ಕೇಂದ್ರಿದ ಕಾಲದಲ್ಲಿ ಮಹಿಳೆಯರು ಸಹ ಹಲವಾರು ಕ್ಷೇತ್ರಗಳಲ್ಲಿ ಸಾಧನೆಗಳನ್ನು ಮಾಡಿದ್ದಾರೆ.*

**Keywords:** *ವಿಜಯನಗರ ಜಿಲ್ಲೆ, ಶಾಸನಗಳು, ಸ್ತ್ರೀಯರು, ಪ್ರಾಗಿತಿಹಾಸ ಕಾಲ.*

## ಪೀಠಿಕೆ

ಸ್ತ್ರೀಯು ಮಾನವ ಜನಾಂಗದ ಸೃಷ್ಟಿಗೆ ಕಾರಣಕರ್ತಳಾದರೂ ಅವಳಿಗೆ ಪುರುಷನ ನಂತರದ ಸ್ಥಾನ ನೀಡಲಾಗಿದೆ. ಅಲ್ಲದೆ ಅನೇಕ ರೀತಿಯ ಕಟ್ಟುಪಾಡುಗಳನ್ನು ವಿಧಿಸಲಾಗಿದೆ. ಆದರೂ ಸಹ ವೇದಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿ, ವಿಶ್ವಾವರ, ಅಪಾಲ, ಘೋಷ, ಅದಿತಿ ಇಂತಹ ಅನೇಕ ಮಹಿಳೆಯರು ವೇದಾಧ್ಯಯನ ಮಾಡಿ ಇತಿಹಾಸದ ಪುಟಗಳಲ್ಲಿ ದಾಖಲಾಗಿದ್ದಾರೆ. ಇಂತಹ ಇನ್ನು ಅನೇಕ ಸ್ತ್ರೀಯರು ಆಡಳಿತ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದ್ದಾರೆ.

ಇಂತಹ ಹಲವಾರು ಸ್ತ್ರೀಯರ ಸಾಧನೆ ಮತ್ತು ಅವರ ಸ್ಥಾನಮಾನವನ್ನು ಶಾಸನ, ಸಾಹಿತ್ಯ ಹಾಗೂ ಶಿಲ್ಪಗಳ ಮೂಲಕ ತಿಳಿಯಬಹುದು. ಈ ರೀತಿ ಸ್ತ್ರೀಯರ ಸ್ಥಾನಮಾನಗಳನ್ನು ವಿಜಯನಗರ ಜಿಲ್ಲೆಯ ಶಾಸನಗಳ ಮೂಲಕ ಈ ಜಿಲ್ಲೆಯಲ್ಲಿ ಇತಿಹಾಸ ಕಾಲಘಟ್ಟದ ಸ್ತ್ರೀಯರನ್ನು ಗುರುತಿಸಲಾಗಿದೆ. ನಮಗೆ

***Please cite this article as:*** *ಮಂಜುಳ.* (2024). *ವಿಜಯನಗರ ಜಿಲ್ಲೆಯ ಶಾಸನೋಕ್ತ ಸ್ತ್ರೀಯರು. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(1), 107–117.

ವಿಜಯನಗರ ಜಿಲ್ಲೆಯು ಮೌರ್ಯರ ಕಾಲದಿಂದಲೂ ಆಳ್ವಿಕೆಗೆ ಒಳಪಟ್ಟಿದ್ದರೂ ಸಹ ಸ್ತ್ರೀಯರನ್ನು ಉಲ್ಲೇಖಿಸುವ ಶಾಸನಗಳು ರಾಷ್ಟ್ರಕೂಟ ಕಾಲದಿಂದ ದೊರೆಯುತ್ತವೆ. ಅಂತಹ ಶಾಸನಗಳನ್ನು ಈ ಮುಂದಿನಂತೆ ಉಲ್ಲೇಖಿಸಲಾಗಿದೆ.

**ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿ ಸ್ತ್ರೀಯರು**

***ಬಳಕ್ಕ***

ಕ್ರಿ.ಶ.908–09ರ ಕೋಗಳಿಯ ಶಾಸನೊಕ್ತ ವೀರಗಲ್ಲಿನಲ್ಲಿ ರಾಷ್ಟ್ರಕೂಟ ಅರಸನ ಕಾಲದಲ್ಲಿ ಹೆಗ್ಗಡೆ ತೊಮ್ಮನೆಂಬುವವನು ಕಾದಿ ಸತ್ತ. ಅವನ ಹೆಂಡತಿ ಬಳಕ್ಕ ಈ ಶಾಸನವನ್ನು ನಿಲ್ಲಿಸಿದಳು ಎಂಬ ವಿಷಯವನ್ನು ಉಲ್ಲೇಖಿಸುತ್ತದೆ.

**ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲಿ ಸ್ತ್ರೀಯರು**

***ಪದುಮಲದೇವಿ***

ಕ್ರಿ.ಶ.1116ರ ಹಡಗಲಿ ತಾಲೂಕಿನ ರಂಗಾಪುರ ಗ್ರಾಮದ ಶಾಸನವು ಚಾಲುಕ್ಯ ರಾಜ ತ್ರಿಭುವನ ಮಲ್ಲದೇವನ ಆಳ್ವಿಕೆಯಲ್ಲಿ ರಾಣಿ ಪದುಮಲದೇವಿ ಮಾಂಗೋಳ ಅಗ್ರಹಾರವನ್ನು ಆಳುತ್ತಿರುವಾಗ ಶೂರರೂ, ಧರ್ಮಾಭಿಮಾನಿಗಳೂ ಮತ್ತು ವಿದ್ಯಾವಂತರಾದ 200 ಮಹಾಜನಗಳು ಆಕೆಯ ಆಳ್ವಿಕೆಯಲ್ಲಿ ಸುಖ ಸಂತೃಪ್ತಿಯನ್ನು ಪಡೆದರು. ಮಹಾಜನರ ವಿನಂತಿಯಂತೆ ರಾಣಿ ಪುಳಿಯಮನಾಯಕನಿಗೆ 11 ಮತ್ತರು ಭೂಮಿಯನ್ನು ನರಸಿಂಹದೇವರ ಪೂಜಾ ಸೇವಾಕಾರ್ಯಕ್ಕಾಗಿ ದಾನ ಮಾಡಲು ಆದೇಶಿಸಿದಳು. ಬಿದಿರಿಪಳ್ಳಿಯ 120 ಮಹಾಜನಗಳು ಅದೇ ದೇವರ ಸೇವಾ ಕಾರ್ಯಕ್ಕಾಗಿ 25 ಗದ್ಯಾಣವನ್ನು ದಾನ ಮಾಡಿದರು. ಸೋಮೇಶ್ವರ ಭಟ್ಟರ ಮಗ ಇಚ್ಛಿಯನಾಯಕ, ಆತನ ಸಹೋದರ ಬಲದೇವಘೈಸಾಸರು ಅದೇ ದೇವರ ಸೇವೆಗಾಗಿ ಭೂದಾನ ಮಾಡಿದರು.

***ಪದ್ಮಾವತಿಯಬ್ಬೆ***

ಕೋಗಳಿಯ ಕಾಲಮಾನ ಉಲ್ಲೇಖ ಇಲ್ಲದ ಶಾಸನವು ಚಾಲುಕ್ಯ ತ್ರೈಲೋಕ್ಯಮಲ್ಲದೇವನ ಕಾಲಕ್ಕೆ ಸೇರಿದ್ದು, ಅವನ ಸಾಮಂತನಾದ ತ್ರೈಲೋಕ್ಯಮಲ್ಲ ನನ್ನಿನೊಲಂಬ ಪಲ್ಲವ ಪೆರ್ಮ್ಮಾನಾಡಿಯ ಲೆಂಕ ನೊಳಂಬಸೆಟ್ಟಿ ಮತ್ತು ಪದ್ಮಾವತಿಯಬ್ಬೆಯರು ಅನೇಕ ಗಾವುಂಡ, ಕೋಗಳಿಯ ನಕರರು ಮತ್ತು 96 ಸಾವಿರದ ನಕರರ ಸಮಕ್ಷಮದಲ್ಲಿ ಛತ್ರಕ್ಕೆ ಭೂದಾನ ನೀಡಿದ ಉಲ್ಲೇಖವಿದೆ.

***ಬಾಚಲದೇವಿ***

ಹಿರೇಹಡಗಲಿಯ ಕಾಲಮಾನ ಉಲ್ಲೇಖವಿಲ್ಲದ ಶಾಸನವು ಮಹಾಮಂಡಳೇಶ್ವರ ವೀರಪಾಂಡ್ಯದೇವನು ಕದಂಬಳಿಗೆ–1000, ಬಲ್ಲಕುಂದೆ–300 ಮತ್ತು ಕೋಗಳಿಯನ್ನು ಆಳುತ್ತಿರುವಾಗ ಆತನ ಚಿಕ್ಕಪ್ಪ ವಿಕ್ರಮಪಾಂಡ್ಯನು ಪತ್ನಿ ಬಾಚಲದೇವಿ ಮತ್ತು ಮಗಳು ಮಹಾದೇವಿಯ ಶ್ರೇಯೋಭಿವೃದ್ಧಿಗಾಗಿ ಭೂದಾನ ಮಾಡಿದ ವಿಷಯ ತಿಳಿಸುತ್ತದೆ.

***ಮಹಾದೇವಿ***

ಕ್ರಿ.ಶ.1148ರ ಹಡಗಲಿ ತಾಲೂಕಿನ ಕೊಟ್ನಕಲ್ಲು ಶಾಸನವು ಚಾಲುಕ್ಯ ದೊರೆಗಳ ವಂಶಾವಳಿ, ಜಗದೇಕಮಲ್ಲನ ಮಾಂಡಲಿಕ ವೀರಪಾಂಡ್ಯದೇವ ಮತ್ತು ಆತನ ತಾಯಿ ಸೋವಲದೇವಿ, ಬಿಲ್ಲವರಾಯನ ಮಗಳು, ವಿಕ್ರಮಾದಿತ್ಯನ ಸಹೋದರಿಯನ್ನು ಕುರಿತ ವಿವರಗಳಿವೆ. ಅಜ್ಜನರನಾಥನ ಮಗ ಬೊಪ್ಪದೇವ, ವಿಕ್ರಮಾದಿತ್ಯನ ಮಗಳು ಮಹಾದೇವಿಯನ್ನು ಕುರಿತು ಶಾಸನವು ಮಾಹಿತಿ ನೀಡುತ್ತವೆ.

***ರೆಬ್ಬಲದೇವಿ***

ಕ್ರಿ.ಶ.1090ರ ಹೂವಿನ ಹಡಗಲಿ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ಅವನ ಮಾಂಡಲಿಕ ಮಹಾಮಂಡಲೇಶ್ವರ ತ್ರಿಭುವನಮಲ್ಲಪಾಂಡ್ಯದೇವನು ನೊಳಂಬವಾಡಿ–32000ವನ್ನು ಆಳುತ್ತಿದ್ದಾಗ ಶೂರ ಬ್ರಾಹ್ಮಣ ಸೇನಾಪತಿ ರವಿಗ ಅಥವಾ ರವಿದೇವನ ಪತ್ನಿಯಾದ ರೆಬ್ಬಲದೇವಿಯು ತನ್ನ ಹುಟ್ಟುರಾದ ಪೂವಿನಪೊಸವಡಂಗಿಲೆಯಲ್ಲಿ ಕೇಶವ

ದೇವಾಲಯವನ್ನು ಕಟ್ಟಿಸಿ ದೇವರನ್ನು ಸ್ಥಾಪಿಸಿ, ದೇವರ ಸೇವಾಕಾರ್ಯಗಳಿಗಾಗಿ ಮತ್ತು ಬ್ರಾಹ್ಮಣರ ಆಹಾರಸತ್ರಕ್ಕಾಗಿ, ಹೂತೋಟಕ್ಕಾಗಿ ಭೂದಾನ ಮುಂತಾದವನ್ನು ಅಲ್ಲಿನ ಬ್ರಾಹ್ಮಣ ಮಹಾಜನಗಳ ಸಮ್ಮುಖದಲ್ಲಿ ದಾನ ಮಾಡಿದಳು. ಅದೇ ರೀತಿ ಈ ಶಾಸನವು ರವಿಗನು ನೀಡಿದಂತಹ ದಾನಗಳು ಹಾಗೂ ರೆಬ್ಬಲದೇವಿಯ ವಂಶಪರಂಪರೆಯನ್ನು ಉಲ್ಲೇಖಿಸುತ್ತದೆ.

***ಸೋವಲದೇವಿ***

ಕ್ರಿ.ಶ.1146ರ ಹರಪನಹಳ್ಳಿ ತಾಲೂಕಿನ ಚಟ್ನಹಳ್ಳಿ ಶಾಸನ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಮಹಾಮಂಡಳೇಶ್ವರನಾದ ಜಗದೇಕಮಲ್ಲ ವೀರಪಾಂಡ್ಯನು ನೊಳಂಬವಾಡಿ–32000ವನ್ನು ಆಳುತ್ತಿದ್ದಾಗ ಇವನ ದಂಡನಾಯಕನು ಉಚ್ಚಂಗಿಯನ್ನು ಅಳುತ್ತಿದ್ದು ಮಾಕೆರೆಯಲ್ಲಿ ದೇವಾಲಯವನ್ನು ಮಾಡಿಸಿ ವೀರಪಾಂಡ್ಯದೇವನಿಗೆ, ಅಜೇಯರಾಯಪಾಂಡ್ಯ ದೇವನಿಗೆ ಪುಣ್ಯವಾಗಲಿ ಎಂದು ಬಿನ್ನೈಸಿದಾಗ ವೀರಪಾಂಡ್ಯನು ಅಜೇಯರಾಯ ಪಾಂಡ್ಯದೇವನ ಕೋರಿಕೆಯಂತೆ ಉಚ್ಚಂಗಿನಾಡಿನ ಮಾಕೆರೆ ನೊಯ್ಯೇಶ್ವರ ದೇವರ ಸೇವೆಗಾಗಿ ಭೂದಾನ ನೀಡುತ್ತಾನೆ. ಅಲ್ಲದೆ ಅಜೇಯರಾಯ ಪಾಂಡ್ಯ ಮತ್ತು ರಾಣಿ ಸೋವಲದೇವಿಗೆ ಪುಣ್ಯವಾಗಲಿ ಎಂದು ನೊಯ್ಯೇಶ್ವರ ದೇವರ ಸತ್ರಕ್ಕೆ 16 ಬ್ರಾಹ್ಮಣರ ಗ್ರಾಸಕ್ಕಾಗಿ ದಾನಬಿಟ್ಟ ಉಲ್ಲೇಖವಿದೆ.

***ಮಲ್ಲವ್ವೆ ಮತ್ತು ಚಂದವ್ವೆ***

ಕ್ರಿ.ಶ.1173–74ರ ಚಟ್ನಹಳ್ಳಿ ಶಾಸನದಲ್ಲಿ ಉಯ್ಯೇಶ್ವರ ದೇವರ ರಾಜಗುರು ದಂಡಪಾಣಿದೇವನು ಮಲ್ಲವ್ವೆ ಮತ್ತು ಚೆಂದವ್ವೆಯರಿಗೆ ಭೂದಾನ ನೀಡಿದ ಉಲ್ಲೇಖವಿದೆ.

***ನೊಳಂಬ ಮಹಾದೇವಿ***

ಕ್ರಿ.ಶ.1052ರ ಹರಪನಹಳ್ಳಿ ತಾಲೂಕಿನ ಪುನಬಗಟ್ಟ ಶಾಸನದಲ್ಲಿ ಚಾಲುಕ್ಯ ರಾಜ ತ್ರೈಲೋಕ್ಯಮಲ್ಲದೇವನ (ಒಂದನೇ ಸೋಮೇಶ್ವರ) ಸಾಮಂತ ತ್ರೈಲೋಕ್ಯಮಲ್ಲ ಇಳವನೊಳಂಬ ಪಲ್ಲವ ಪೆರ್ಮ್ಮಾನಡಿ ನಾರಸಿಂಘದೇವನ ಆಳ್ವಿಕೆಯಲ್ಲಿ ನಾರಸಿಂಘದೇವನ ರಾಣಿಯಾದ ನೊಳಂಬ ಮಹಾದೇವಿಯು ಹೊಸಗೆರೆಯ ಮಹಾದೇವರ ಪೂಜೆಗಾಗಿ ಭೂದಾನ ಮಾಡಿದ ಉಲ್ಲೇಖವಿದೆ.

***ಕೇತಲದೇವಿ***

ಕ್ರಿ.ಶ.1169ರ ಹರಪನಹಳ್ಳಿ ತಾಲೂಕಿನ ಅಲಗಿಲವಾಡದ ಶಾಸನದಲ್ಲಿ ಪಾಂಡ್ಯ ದೊರೆ ವಿಜಯಪಾಂಡ್ಯದೇವನ ಮಹಾ ಪ್ರಧಾನ ಪೆರ್ಮಾಡಿ ದಂಡನಾಥನನ್ನು, ಇವನ ದಂಡನಾಥ ಕೇತನನ್ನು, ಇವನ ಪೆರ್ಗಡೆ ದಾಸಿಯಣ್ಣನನ್ನು ಹೆಸರಿಸುತ್ತದೆ. ದಾಸಿಯಣ್ಣನ ಹೆಂಡತಿಯೂ ಕೇತಲದೇವಿಯ ತಂಗಿಯೂ ಆದ ಅರಸಿಯಕ್ಕಳ ಮಗ ಬಮ್ಮದೇವನ ಉಲ್ಲೇಖವಿದೆ.

***ಲಕ್ಷ್ಮೀದೇವಿ***

ಹರಪನಹಳ್ಳಿ ತಾಲೂಕಿನ ಮಾಡಲಗೇರಿ ಗ್ರಾಮದ ಶಾಸನದ ಕಾಲಮಾನವು ತೃಟಿತಗೊಂಡಿದ್ದು, ರಾಜ ತ್ರಿಭುವನಪಾಂಡ್ಯದೇವನು ನೊಳಂಬವಾಡಿ–32000ವನ್ನು ಆಳುತ್ತಿದ್ದ ವಿವರವಿದೆ. ನಾಕರಸ ಮತ್ತು ಅವನ ಹೆಂಡತಿ ಲಕ್ಷ್ಮೀದೇವಿಯು ಅತ್ತಿಮೇಶ್ವರದೇವರ ನೈವೇದ್ಯ, ಅಂಗಭೋಗ ಮತ್ತು ನಂದಾದೀವಿಗೆಗೆ ದಾನವನ್ನು ಬಿಟ್ಟ ವಿವರವಿದೆ.

***ಬಾಚಲದೇವಿ***

ಕ್ರಿ.ಶ.1079ರ ಬಾಗಳಿ ಶಾಸನವು ಚಾಲುಕ್ಯ ದೊರೆ ವಿಕ್ರಮಾದಿತ್ಯನು ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾದ ಪಾಂಡ್ಯದೇವನು ನೊಳಂಬವಾಡಿ–32000ವನ್ನು ಆಳುತ್ತಿರಲು, ಬಾಗುಳಿಯ 50 ಮಹಾಜನರ ಸನ್ನಿಧಿಯಲ್ಲಿ ಅರಸಿಯಕೆಯ ಕಲಿಯಮಗೌಡನ ಮಗಳೂ, ಪಿರಿಯಾಡಪೆರ್ಗ್ಗಡೆಯ ಹೆಂಡತಿಯೂ ಆದ ಬಾಚಲದೇವಿಯು ಬಾಗುಳಿಯ ಕಲಿದೇವರ

ಪೂಜೆ ಮುಂತಾದಗಳಿಗೆ ಭೂದಾನ ನೀಡಿದ ವಿಷಯವನ್ನು ಒಳಗೊಂಡಿದೆ.

***ಮಹಾದೇವಿ***

ಬಾಗಳಿಯ ಕಾಲಮಾನ ಉಲ್ಲೇಖವಿಲ್ಲದ ಶಾಸನವೊಂದರಲ್ಲಿ ನಾದೇವಘೆಸನ ಹೆಂಡತಿ ಮಹಾದೇವಿಯು ವೀರಕೇಶವ ದೇವರ ರಂಗಭೋಗ, ನೈವೇದ್ಯಕ್ಕೆ ಭೂದಾನ ನೀಡಿದ ಉಲ್ಲೇಖವಿದೆ.

***ಮಾಚಕ್ಕ***

ಕ್ರಿ.ಶ.1115ರ ಬಾಗಳಿ ಶಾಸನವು ತ್ರಿಭುವನಮಲ್ಲದೇವನು ರಾಜ್ಯಭಾರ ಮಾಡುತ್ತಿದ್ದಾಗ ತ್ರಿಭುವನಮಲ್ಲ ಪಾಂಡ್ಯನು ನೊಳಂಬವಾಡಿ–32000ವನ್ನು ಆಳುತ್ತಿದ್ದಾಗ ಯೆಲೆಕಲ ಭೊಜಂಗರ ಈಶ್ವರಯ್ಯನ ಮಾಚಕ್ಕ ಎಂಬುವವಳು ಬಾಳ್ಗುಳಿಯ 50 ಮಹಾಜನರ ಸನ್ನಿಧಾನದಲ್ಲಿ ಶಿವಶಕ್ತಿ ಪಂಡಿತರ ಕಾಲನ್ನು ತೊಳೆದು ಕಲಿದೇವರ ನೈವೇದ್ಯಕ್ಕೆ 20 ಗದ್ಯಾಣ ನೀಡಿದ ವಿಷಯವನ್ನು ತಿಳಿಸುತ್ತದೆ.

***ಶಾಂತಿಕಬ್ಬೆ***

ಕ್ರಿ.ಶ.1122ರ ಬಾಗಳಿಯ ಶಾಸನದಲ್ಲಿ ತ್ರಿಭುವನಮಲ್ಲನು ಆಳುತ್ತಿದ್ದಾಗ ಅವನ ಮಾಂಡಳಿಕ ತ್ರಿಭುವನಮಲ್ಲ ಪಾಂಡ್ಯನ ಕಾಲದಲ್ಲಿ ವಿಷ್ಣುವ್ರಿದ್ಧಗೋತ್ರದ ಗುಜ್ಜರ ಶಾಂತಿಕಬ್ಬೆಯು ಬಾಳ್ಗುಳಿಯ 50 ಮಹಾಜನರ ಸನ್ನಿಧಿಯಲ್ಲಿ ಶಿವಶಕ್ತಿ ಪಂಡಿತರ ಕಾಲನ್ನು ತೊಳೆದು ಕಲಿದೇವರ ನೈವೇದ್ಯಕ್ಕಾಗಿ ಹಾಗೂ ಪುರಾಣ ಓದುವ ಉಪಾಧ್ಯಾಯರಿಗೆ 30 ಕಮ್ಮ ತೋಟವನ್ನು ನೀಡಿದ ವಿಷಯವಿದೆ.

***ಕೇತಬ್ಬರಸಿ ಮತ್ತು ನಾಗಿಯಾಂಡೆಯರಸಿ***

ಕ್ರಿ.ಶ.1153ರ ಬಾಗಳಿಯ ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯಲ್ಲಿ ಅವನ ಸಾಮಂತನಾದ ಜಗದೇಕಮಲ್ಲ ವೀರಪಾಂಡ್ಯನ ಮಾವ ವಿಕ್ರಮಾದಿತ್ಯರಸನು ಬಾಳ್ಗುಳಿಯ 50 ಮಹಾಜನರಿಗೆ 173 ಗದ್ಯಾಣವನ್ನು ಬಿಟ್ಟು ಇದರ ಬಡ್ಡಿಯಲ್ಲಿ ದೇವಾಲಯದ 13 ಬ್ರಾಹ್ಮಣರಿಗೆ ಪಡಿಯ ರೂಪದಲ್ಲಿ ನೀಡುವಂತೆಯೂ ಕಲಿದೇವರ ಒಂದು ನಂದಾದೀಪ ಹಾಗೂ ನರಸಿಂಹದೇವರ ಒಂದು ನಂದಾದೀಪ ನಡೆಸಲು ಬಿಡುತ್ತಾನೆ. ಈ ಧರ್ಮದ ಫಲವು ವಿಕ್ರಮಾದಿತ್ಯದೇವನ ಅತ್ತೆ ಕೇತಬ್ಬರಸಿ ಹಾಗೂ ಅವನ ಪತ್ನಿ ನಾಗಿಯಾಂಡೆಯರಸಿಗೆ ಸಲ್ಲಬೇಕೆಂದಿದೆ.

***ಧರ್ಮವ್ವ***

ಕ್ರಿ.ಶ.1160ರ ಬಾಗಳಿಯ ಶಾಸನವು ಚಾಲುಕ್ಯ ಜಗದೇಕಮಲ್ಲನು ಆಳುತ್ತಿದ್ದಾಗ ಅವನ ಸಾಮಂತ ವೀರ ಪಾಂಡ್ಯನು ಕದಂಬಳಿಗೆ–1000, ಬಲ್ಲಕುಂದೆ–300, ಕೋಗಳಿ–500ನ್ನು ಆಳುತ್ತಿದ್ದಾಗ ಬಾಗುಳಿಯ 50 ಮಹಾಜನ ಸಮಕ್ಷಮದಲ್ಲಿ ಮಾಳಪ್ಪಯ್ಯ ಮಗನಾದ ಸಿದ್ದಣ್ಣನ ಪತ್ನಿಯಾದ ಧರ್ಮವ್ವ ಎಂಬುವವಳು ತಾನು ಬಾಗುಳಿಯಲ್ಲಿ ಸ್ಥಾಪಿಸಿದ ಲಕ್ಷ್ಮೀನಾರಾಯಣದೇವರ ಪೂಜಾರ್ಥವಾಗಿ ಭೂದಾನ ನೀಡುತ್ತಾಳೆ. ಈ ಉತ್ಪತ್ತಿಯಲ್ಲಿ ಪುರಾಣ ಹೇಳುವವನಿಗೆ, ಶಾಸ್ತ್ರವ್ಯಾಖ್ಯಾನ ಮಾಡುವವನಿಗೆ, ಅಗ್ರಾಸನದ ಬ್ರಾಹ್ಮಣ ಭೋಜನಕ್ಕೆ ಮುಂತಾದವಕ್ಕೆ ವ್ಯಯ ಮಾಡಬೇಕೆಂದಿದೆ. ಶಾಸನದಲ್ಲಿ ಧರ್ಮವ್ವಯನ್ನು ಆಕೆಯ ಬುದ್ಧಿಮತ್ತೆಯನ್ನು ಹೊಗಳಿದೆ. ಈ ಶಾಸನದಲ್ಲಿ ಜಗದೇಕಮಲ್ಲನ ಹೆಸರಿದ್ದರು ಕ್ರಿ.ಶ.1150ಕ್ಕೆ ಅವನ ಉತ್ತರಾಧಿಕಾರಿಯ ಸಿಂಹಾಸನವನ್ನೇರಿದ್ದ.

***ಶ್ರೀಯಾದೇವಿ***

ಕ್ರಿ.ಶ.1113ರ ಕೂಡ್ಲಿಗಿ ತಾಲೂಕಿನ ಶಾಸನವು ಚಾಲುಕ್ಯ ತ್ರಿಭುವನಮಲ್ಲದೇವನ ಸಾಮಂತನಾದ ತ್ರಿಭುವನಮಲ್ಲ ವೀರಪಾಂಡ್ಯದೇವನು ಕೇಸಪುರದ ನೆಲೆವೀಡಿನಿಂದ ರಾಜ್ಯವಾಳುತ್ತಿದ್ದಾಗ ಕದಂಬ ವಂಶದ ನಾಚಿದೇವನ ಮಗನಾದ ಘಟ್ಟಿದೇವನು ಕೊಟ್ಟೂರು–12 ಮತ್ತು ಕೋಗಳಿ–500ನ್ನು ಆಳುತ್ತಿದ್ದನು. ಈ ಘಟ್ಟಿದೇವ, ಇವನ ಪತ್ನಿ ಶ್ರೀಯದೇವಿ, ಇವನ ತಮ್ಮ ಜಗದಳ ವಿರೂಪಾಕ್ಷದೇವ ಇವರುಗಳು ಸಿರಿಯ ಮೇಹೇಶ್ವರ ಮತ್ತು ರಾಮೇಶ್ವರ ದೇವರುಗಳ ಒಡೆಯನಾಗಿದ್ದ ಕೇದಾರಪಂಡಿತದೇವನ ಕಾಲನ್ನು ತೊಳೆದು ಡಕ್ಕೇಶ್ವರ ಮತ್ತು ಮಲ್ಲಿಕಾರ್ಜುನ ದೇವರ

ಪೂಜೆ ಇತರ ಸೇವೆಗಳಿಗಾಗಿ ಭೂದಾನ ನೀಡಿದ ವಿಷಯವಿದೆ.

***ಪಾತ್ರದ ಸಿರಿಯವೆ***

ಕ್ರಿ.ಶ.1035ರ ಬಾಗಳಿಯ ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಆಳ್ವಿಕೆಯಲ್ಲಿ ಬಾಳ್ಗುಳಿಯ ಮಹಾಜನರು ಮತ್ತು ಇತರರು ಕಲಿದೇವರ ದೇವಾಲಯದಲ್ಲಿ ಸೇರಿ, ಅಚ್ಚಿವಳ್ಳಿಯದ ಗಣಮಯ್ಯನ ತಮ್ಮ ನಾಯ್ಚಯ್ಯನ ಕೈಯಿಂದ ಅಕ್ಕಸಾಲಿ ಆಯವಾಗಿ ಬಂದಿದ್ದ ಧಾನ್ಯ ಮತ್ತು ಉಪ್ಪನ್ನೆಲ್ಲವನ್ನು ಪೊನ್ನಿಗೆ ಎರಡು ಬಳ್ಳವನ್ನು ಕೊಂಡುಕೊಳ್ಳಲು 103 ಗದ್ಯಾಣವನ್ನು ಬಿಟ್ಟು ಇದರ ಹುಟ್ಟುವಳಿಯಲ್ಲಿ ನಿತ್ಯವು ನಾಲ್ಕು ಜನರಿಗೆ ಸತ್ರವನ್ನು ನಡೆಸುವಂತೆ ದಾನ ನೀಡುತ್ತಾರೆ ಮತ್ತು ಅದೇ ಕಲಿದೇವರ ಮುಂದಿನ ನಂದಾದೀವಿಗೆಯ ಸೇವೆಗಾಗಿ ಹಾಡುಗಾರರಾದ ಕಾಮವೆ ನಾಗವೆಯ ಮಗಳಾದ ಪಾತ್ರದ ಸಿರಿಯವೆಯು ವರ್ಷಕ್ಕೆ ಎರಡು ಪಣವನ್ನು ದಾನ ಬಿಡುತ್ತಾಳೆ ಎಂಬ ವಿಷಯವಿದೆ.

**ಹೊಯ್ಸಳರ ಕಾಲದ ಶಾಸನಗಳಲ್ಲಿ ಸ್ತ್ರೀಯರು**

***ಪದುಮಲಾದೇವಿ***

ಹಡಗಲಿ ತಾಲೂಕಿನ ಕುರುವತ್ತಿ ಗ್ರಾಮದ ಕ್ರಿ.ಶ.1205ರ ಕಾಲಮಾನಕ್ಕೆ ಸೇರಿದ ಶಾಸನದಲ್ಲಿ ಪಟ್ಟಮಹಾದೇವಿ ಪದುಮಲದೇವಿಯರ ಮಹಾಪ್ರಧಾನ ಭಂಡಾರಿ ಸೋವರಸನು ಗುತ್ತೋಳಲಿನಿಂದ ಆಳುತ್ತಿರುವಾಗ ಲೋಕಾಭರಣದೇವನ ಕಾಲು ತೊಳೆದು ಆಹವಮಹಾಮಲ್ಲೇಶ್ವರ ದೇವರಿಗೆ ಆರು ಮತ್ತರು ಭೂಮಿಯನ್ನು ದಾನ ನೀಡಿದ ವಿವರವಿದೆ. ಈ ಶಾಸನವು ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ ಸೇರಿದೆ.

ಕ್ರಿ.ಶ.1212ರ ಹಿರೇಹಡಗಲಿ ಶಾಸನದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನ ಇಮ್ಮಡಿ ವೀರಬಲ್ಲಾಳನು ಹಳ್ಳವುರ ಅಥವಾ ವಿಜಯಸಮುದ್ರದ ನೆಲೆವೀಡಿನಿಂದ ಬನವಾಸಿ–12000, ನೊಳಂಬವಾಡಿ– 32000, ಹುಲಿಗೆರೆ–300, ಬೆಳುವಲ–2, ಮಸವಾಡಿ ಮೊದಲಾಗಿ ಹೆದ್ದೊರೆವರೆಗೆ ಆಳುತ್ತಿದ್ದಾಗ ಆತನ ಹಿರಿಯರಾಣಿ ಪದುಮಲದೇವಿ ಹೊಸಪಂಡಗಿಲೆಯನ್ನು ಆಳುತ್ತಿದ್ದಳು ಎಂಬ ವಿಷಯವನ್ನು ಉಲ್ಲೇಖಿಸಲಾಗಿದೆ.

***ಕನ್ನಾಯಿ***

ಕ್ರಿ.ಶ.1297ರ ಮಾನ್ಯರಮಸಲವಾಡದ ಶಾಸನವು ಯಾದವ ದೊರೆ ರಾಮಚಂದ್ರದೇವನ ಆಳ್ವಿಕೆಗೆ ಸೇರಿದ್ದು, ಪೊಸ್ತಕಗಚ್ಚ, ದೇಶಿಗಣ, ಮೂಲಸಂಘದ ನೇಮಿಚಂದ್ರರಾವುಳನ ಶಿಷ್ಯ, ವಿನಯ ಚಂದ್ರದೇವನಿಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಸಾವಂತ ಪಂಡಿತನ ಮಗನಾದ ಕೇಶವ ಪಂಡಿತನು ಮೊಸಳೆವಾಡದ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿದಾಗ ವೈಷ್ಣವ ಎಂಟುಭಕ್ತನಾದ ಮಹಾಮಂಡಲೇಶ್ವರ ಭೈರವದೇವಸನು ಕೆಲವು ಗೌಡರೊಡಗೂಡಿ ಈ ದಾನವನ್ನು ಮಾಡಿದನು. ಎಂಟುಹಿಟ್ಟು ಮತ್ತು ಗ್ರಾಮದ ಜನರು ಮತ್ತು ಹಗರನೂರಿನ ಮುಖ್ಯಸ್ಥ ಪಾರಿಸಗೌಡನು ಪಾಶ್ವನಾಥ ದೇವಾಲಯಕ್ಕೆ ಭೂದಾನವನ್ನು ಮಾಡಿದರು. ಮೊಸಳವಾಡದ ಈ ಪಾರ್ಶ್ವನಾಥ ದೇವಾಲಯವನ್ನು ಕೇಶವ ಪಂಡಿತನ ತಾಯಿ ಕನ್ನಾಯಿ ಮಾಡಿಸಿದಳು.

***ಸೂಳೆ ಬೊಮ್ಮವೆ***

ಬಾಗಳಿಯ ಕಲ್ಲೇಶ್ವರ ದೇವಾಲಯದ ಹೊಯ್ಸಳರ ಕಾಲದ (ಅರಸ ವೀರನರಸಿಂಹ) ಶಾಸನವೊಂದರಲ್ಲಿ ಹರಕಾರ ದೇವಣನ ಮಗಳು ಸೂಳೆ ಬೊಮ್ಮವೆಯು ಅರವಟಿಗೆಗೆ ಬಾಗುಳಿಯ ಮಹಾಜನರ ಕಾಲು ತೊಳೆದು ದಾನ ನೀಡಿದ ವಿಷಯವಿದೆ.

**ಕಮ್ಮಟದುರ್ಗದ ಅರಸರ ಕಾಲದ ಶಾಸನಗಳಲ್ಲಿ ಸ್ತ್ರೀಯರು**

***ಮಾರನಾಯಕಿತಿ***

ಕಾಲದ ಉಲ್ಲೇಖವಿಲ್ಲದ ಹಂಪಿಯಲ್ಲಿ ಶಾಸನವು ಕ್ರಿ.ಶ. 14ನೇ ಶತಮಾನದ ಆರಂಭಕಾಲಕ್ಕೆ ಸೇರಿದುದಾಗಿದೆ. ಸಂಗಮೇಶ್ವರ ದೇವರ ಪಾದಾರಾಧಕ ಮುಮ್ಮಡಿ ಸಿಂಗೆಯನಾಯಕನ

ಮಗನಾದ ವೀರ ಕಂಪಿಲದೇವನು ತಮ್ಮ ತಾಯಿ ಮಾರನಾಯಕಿತಿ, ತಂದೆ ಸಿಂಗೆಯನಾಯಕನ ಮತ್ತು ಪೆರುಡಿನಾಯಕನ ಹೆಸರಿನಲ್ಲಿ ಮೂರು ಲಿಂಗ ಗಳನ್ನು ಪ್ರತಿಷ್ಠೆ ಮಾಡಿ ಶಿವಾಲಯವನ್ನು ಕಟ್ಟಿಸಿದನ್ನು ಉಲ್ಲೇಖಿಸುತ್ತದೆ.

***ಗಂಗವ್ವ ನಾಯಕಿತಿ***

ಕ್ರಿ.ಶ.1406ರ ಶಾಸನದಲ್ಲಿ ಕೇಸಯನಾಯಕ ಹಾಗೂ ಗಂಗವ್ವನಾಯಕಿತಿಯ ಮಗ ನಗೆಯನಾಯಕನು ಗೋಪಿನಾಥರ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ.

ಕ್ರಿ.ಶ.1410ರ ಶಾಸನವು ಕ್ಯಾಸೆಯನಾಯಕ ಗಂಗವ್ವನಾಯಕಿತಿಯ ಮಗ ನಾಂಗ್ಯನಾಯಕನು ಗೋಪಿನಾಥ ದೇವರ ಹಾಗೂ ಮಹಾಲಕ್ಷ್ಮೀ ದೇವರ ಮಂಟಪವನ್ನು ಮಾಡಿಸಿದ.

**ವಿಜಯನಗರ ಕಾಲದ ಶಾಸನಗಳಲ್ಲಿ ಸ್ತ್ರೀಯರು**

***ಬುಕ್ಕಯವೆ***

ಕ್ರಿ.ಶ.1397ರ ಹಂಪಿಯ ಶಾಸನವು ವೀರ ಹರಿಹರರಾಯನ ರಾಣಿಯಾದ ಬುಕ್ಕಯವೆಯು ತನ್ನ ಗುರು ಭಾಸ್ಕರದೇವಯ್ಯನಿಗೆ ಪುಣ್ಯವಾಗಲೆಂದು ಜಡೆಯಶಂಕರ ದೇವರ ಮುಂದೆ ದೀಪಮಾಲೆ ಕಂಬವನ್ನು ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ.

**ಚೌಡಾಯಿ**

ಹಂಪಿಯ ಕಾಲಮಾನ ಉಲ್ಲೇಖವಿಲ್ಲದ ಶಾಸನವು, ವೀರಹರಿಹರನ ಮನೆಯ ಹೆಗ್ಗಡತಿಯಾದ ಚೌಡಾಯಿಯು ಪ್ರತಿಷ್ಠೆ ಮಾಡಿಸಿದ್ದನ್ನು ತಿಳಿಸುತ್ತದೆ.

***ಸಿಂಗಲೆ***

ಕ್ರಿ.ಶ.1410ರ ಶಾಸನದಲ್ಲಿ ಕವಿಯು ಆರಂಭದಲ್ಲಿ ಮಹಾ ಗಣಪತಿಯನ್ನು ಸ್ತುತಿಸಿದ್ದಾನೆ. ಮುಂದೆ ವಿಜಯನಗರದ ವಂಶಾವಳಿಯನ್ನು ಸಂಗಮನಿಂದ ಆರಂಭಿಸಿ ದೇವರಾಯನವರೆಗೆ ನೀಡಿದೆ. ಸೋಮ ವಂಶದಲ್ಲಿ ಸಂಗಮನು ಹುಟ್ಟಿದ. ಇವನ ಮಕ್ಕಳು ಹರಿಹರ ಮತ್ತು ಬುಕ್ಕ. ಬುಕ್ಕರಾಯನ ಮಗ ಪ್ರತಾಪ ಹರಿಹರ. ಈ ಪ್ರತಾಪಹರಿಹರನ ಮಗನೇ ದೇವರಾಜ ಅಥವಾ ದೇವರಾಯ. ಈ ದೇವರಾಯನ ಮಂತ್ರಿಗಳು ಮಾದರಸ ಮತ್ತು ಸಾಯಣರು. ಮಾದರಸ ಮತ್ತು ಸಾಯಣರು ಅನೇಕ ಸಮಾಜೋದ್ಧಾರ ಕಾರ್ಯಗಳನ್ನು ಮಾಡಿ ಜನಪ್ರಿಯರಾಗಿದ್ದರು. ಇವರ ತಂಗಿ ಸಿಂಗಲೆ. ಈ ಸಿಂಗಲೆಯು ರಾಮರಸನನ್ನು ಮದುವೆಯಾಗಿದ್ದಳು.

ಈ ಸಿಂಗಲೆ ಮತ್ತು ರಾಮರಸನಿಗೆ ಲಕ್ಷ್ಮೀಧರ, ಚೆನ್ನಮಂತ್ರಿ, ಬುಕ್ಕಣ್ಣ, ಮಾಧವ ಮತ್ತು ಪೆರ್ಗಡೆ ಎಂಬ ಐದು ಜನ ಮಕ್ಕಳು. ಇವರಲ್ಲಿ ಹಿರಿಯನಾದ ಲಕ್ಷ್ಮೀಧರನು ದೇವರಾಯನ ಮಂತ್ರಿಯಾಗಿ ತನ್ನ ಸೋದರ ಮಾವಂದಿರು ಮಾಡಿದ ಸಮಾಜೋದ್ಧಾರ ಕಾರ್ಯಗಳಾದ ಕೆರೆಯ ನಿರ್ಮಾಣ, ಬಾವಿಗಳ ತೋಡಿಸುವಿಕೆ, ದೇವಾಲಯಗಳ ನಿರ್ಮಾಣ ಮುಂತಾದ ಕಾರ್ಯಗಳನ್ನು ಮುಂದುವರಿಸಿದನೆಂದು ಶಾಸನ ತಿಳಿಸುತ್ತದೆ. ಇವನಿಗೆ ದೇವಕಿ ಮತ್ತು ಸೋವಲೆ ಎಂಬ ಇಬ್ಬರು ಪತ್ನಿಯರು. ಶಾಸನ ಇವನ ಸದ್ಗುಣಗಳನ್ನು ಅನೇಕ ರೀತಿಯಲ್ಲಿ ವರ್ಣಿಸಿದೆ.

***ನಾಗಾಜಿ(ಲಾ)ದೇವಿ***

ಕ್ರಿ.ಶ.1510ರ ಶಾಸನದಲ್ಲಿ ತುಳುವ ವಂಶದ ವಂಶಾವಳಿಯನ್ನು ಪುರಾಣದ ವ್ಯಕ್ತಿಗಳಾದ ಚಂದ್ರನಿಂದ ಆರಂಭಿಸಿ ಚಂದ್ರ, ಅವನ ಮಗ ಬುಧ, ಅವನ ಮಗ ಪುರೂರವ, ಅವನ ಮಗ ಆಯು, ಅವನ ಮಗ ನಹುಷ, ಅವನ ಮಗ ಯಯಾತಿ ಎಂದು ಹೇಳಿದೆ. ಈ ಯಯಾತಿಯ ಪತ್ನಿ ದೇವಯಾನಿಯ ಗರ್ಭದಲ್ಲಿ ತುರ್ವಸು ಉದಿಸಿದ. ಈ ತುರ್ವಸುವಿನ ವಂಶದಲ್ಲಿ ತುಳುವ ವಂಶದಲ್ಲಿ ಪ್ರಖ್ಯಾತನಾದ ತಿಮ್ಮ ಎಂಬುವವನು ಉದಿಸಿದ. ಇವನ ಪತ್ನಿ ದೇವಕಿ ಇವನ ಮಗ ಈಶ್ವರ. ಇವನ ಪತ್ನಿ ಬುಕ್ಕಮ. ಇವನ ಮಗ ನರಸ ಅಥವಾ ನರಸಿಂಹ. ಇವನಿಗೆ ಇಬ್ಬರು ಪತ್ನಿಯರು. ಮೊದಲ ಪತ್ನಿ ತಿಪ್ಪಾಜಿಯ ಗರ್ಭದಲ್ಲಿ ವೀರ ನರಸಿಂಹನೂ,

ಎರಡನೇ ಪತ್ನಿ ನಾಗಲಾದೇವಿಯ ಗರ್ಭದಲ್ಲಿ ಕೃಷ್ಣದೇವರಾಯನ ಉದಿಸಿದ ಎಂದು ವರ್ಣಿಸಿದೆ.

ಕ್ರಿ.ಶ.1513ರ ಹಂಪಿಯ ಶಾಸನದಲ್ಲಿ ಕೃಷ್ಣದೇವರಾಯನು ಶ್ರೀ ಪ್ರಸನ್ನ ವಿರೂಪಾಕ್ಷ ದೇವರ ಅಮೃತಪಡಿ, ನೈವೇದ್ಯ, ಅಂಗರಂಗವೈಭೋಗ, ಮಾಘಮಾಸದ ರಥೋತ್ಸವ, ನಿತ್ಯೋತ್ಸವ, ಪಕ್ಷೋತ್ಸವ, ಸಂವತ್ಸರೋತ್ಸವ, ದೀಪಾರಾದನೆ ಮುಂತಾದ ಪುಣ್ಯ ತಿಥಿಗಳಲ್ಲಿ ನಡೆಯುವ ಮಹಾಪ್ರಜೆ, ಮಹಾ ನೈವೇದ್ಯಕ್ಕಾಗಿ ಕಂಬಕಿಯಕಟೆ ಗ್ರಾಮವನ್ನು ಸಮರ್ಪಿಸುತ್ತಾನೆ. ಈ ದಾನವನ್ನು ಆಂಗೀರಸ ಸಂವತ್ಸರದ ಪಾಲ್ಗುಣ, ಬ.10ರ ಸೋಮವಾರ ಸೂರ್ಯಗ್ರಹಣ ಪುಣ್ಯ ಕಾಲದಲ್ಲಿ ತನ್ನ ತಂದೆ ನರಸಣನಾಯಕ ತಾಯಿ ನಾಗಾಜಿದೇವಿ ಅಮ್ಮನಿಗೆ ಪುಣ್ಯವಾಗಬೇಕೆಂದು ಸಮರ್ಪಿಸಿದೆ. ಕೃಷ್ಣದೇವರಾಯನು ಸಾಕಷ್ಟು ದಾನದಿತ್ತಿಗಳನ್ನು ತನ್ನ ತಂದೆ ನರಸನಾಯಕ ತಾಯಿ ನಾಗಾಜಿದೇವಿಯರ ಹೆಸರಿನಲ್ಲಿ ನೀಡಲಾಗಿದೆ.

ಕ್ರಿ.ಶ. 1516ರ ನಾಗೇನಹಳ್ಳಿ ಶಾಸನದಲ್ಲಿ ಜಾಮದಗ್ನ್ಯ ವತ್ಸಗೋತ್ರದ ನಂಜಿನಾಥ ಭಟ್ಟನ ಮಗ ರಂಗನಾಥ ದೀಕ್ಷಿತನು ಗ್ರಾಮದ ಮಾನ್ಯ ವನ್ನು ಪಡೆದುಕೊಂಡು, ರಾಜನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ನಾಗಸಮುದ್ರವೆಂಬ ಕೆರೆಯನ್ನು, ನಾಗೇಶ್ವರವೆಂಬ ಶಿವದೇವಾಲಯವನ್ನು, ನಾಗೇಂದ್ರಶಯನವೆಂಬ ವಿಷ್ಣು ದೇವಾಲಯವನ್ನು ಕಟ್ಟಿಸಿ ನಾಗಲಾದೇವಿಪುರವೆಂಬ ಅಗ್ರಹಾರವನ್ನು ಮಾಡಿ ಬ್ರಾಹ್ಮಣರಿಗೆ ವೃತ್ತಿಗಳನ್ನು ಹಂಚಿದ ಉಲ್ಲೇಖವಿದೆ.

ಕ್ರಿ.ಶ. 1512ರ ಹೊಸಪೇಟೆಯ ಮುದ್ದಲಾಪುರದ ಶಾಸನ ಕೃಷ್ಣದೇವರಾಯ ಮಹಾರಾಜನು ತನ್ನ ನರಸಣ ನಾಯಕ ಒಡೆಯರಿಗೂ, ತಾಯಿ ನಾಗಾಜಿ ದೇವಿ ಅಮ್ಮನವರಿಗೂ ಪುಣ್ಯವಾಗಬೇಕೆಂದು ವಿಠಲ ದೇವರ ಅನೇಕ ವಿಧದ ಪೂಜೆಗಳಿಗೆ ಹೊಸವೂರು ಮಾಗಾಣೆಯ ವಿರುಪಾಪುರವನ್ನು ಸೂರ್ಯಗ್ರಹಣದಂದು ದಾನ ನೀಡಿದ ಉಲ್ಲೇಖವಿದೆ.

***ಚಿನ್ನಾದೇವಿ ಮತ್ತು ತಿರುಮಲದೇವಿ***

ಕ್ರಿ.ಶ.1513ರ ಹಂಪಿಯ ಶಾಸನದಲ್ಲಿ ಕೃಷ್ಣದೇವರಾಯನ ಪಟ್ಟದರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಶ್ರೀ ವಿಠಲದೇವರಿಗೆ ಗೋಪುರಗಳನ್ನು ಕಟ್ಟಿಸಿ, ದೇವರ ಆರೋಗಣೆಗೆ ಒಂದು ಚಿನ್ನದ ಹರಿವಾಣ, 9 ಬೆಳ್ಳಿಯ ನಿರಾಂಜನದ ಹಲಿಗೆ, ಎಂಟು ಹಿರಿಯ ಆರತಿ, ಒಂದು ಪುರುಷಾಮೃಗದ ಆರತಿ, ಮೂರು ನಾಗಾರತಿ, ಒಂದು ಧೂಪಾವರತಿ, ಎರಡು ಕಖಡಿಬರ್ತಿ, ಒಂದು ಪ್ರತುಮೆ ಆರತಿಯನ್ನು ದೇವರಿಗೆ ಸಮರ್ಪಿಸುತ್ತಾರೆ.

***ತಿರುಮಲದೇವಿ***

ಕ್ರಿ.ಶ.1518ರ ಶಾಸನದಲ್ಲಿ ಕೃಷ್ಣರಾಯ ಮಹಾರಾಯನ ಕಾಲದಲ್ಲಿ ಅವನ ಪಟ್ಟಮಹಾದೇವಿಯಾದ ತಿರುಮಲದೇವಿ ಅಮ್ಮನು ವಿಜಯನಗರದ ಬಳಿ ಇದ್ದ ಕುಮ್ಮರಗುಂಟೆ ಎಂಬ ಭೂಮಿಯನ್ನು ವಿಜನಗರದ ಅಂಜನಗಿರಿಯ ಕರಿಯ ತಿರುಮಲ ಮಹಾರಾಯನಿಗೆ ಪುಣ್ಯವಾಗಬೇಕೆಂದು ನೀಡಿದುದಾಗಿ ಉಲ್ಲೇಖಿಸುತ್ತದೆ.

***ಬುಕ್ಕಾಜಿ***

ಕ್ರಿ.ಶ.1510ರ ಹಂಪಿಯ ವಿರೂಪಾಕ್ಷ ದೇವಾಲಯದ ಶಾಸನವು ನರಸನಾಯಕನ ತಾಯಿ ಬುಕ್ಕಾಜಿ ಅಮ್ಮನು ಹಂಪೆಯ ತಿರುಮಲಭಟ್ಟನ ಮಗ ಸಾಇಭಟ್ಟನಿಗೆ, ವಿರೂಪಾಕ್ಷ ದೇವರ ನೈವೇದ್ಯಕ್ಕಾಗಿ ಭೂದಾನವನ್ನು ಮಾಡಿದ ವಿಷಯ ತಿಳಿಸುತ್ತದೆ.

***ವೀರಮ್ಮ***

ಕ್ರಿ.ಶ.1528ರ ಮೊರಬ ಶಾಸನದಲ್ಲಿ ಕೃಷ್ಣದೇವರಾಯನು ಆಳುತ್ತಿದ್ದಾಗ ಎಲಬರಿಗೆಯ ಮಲ್ಲಪ್ಪಣ್ಣನು ಮೊರಬದಲ್ಲಿ ತನ್ನ ತಾಯಿ ವೀರಮ್ಮನಿಗೆ ಪುಣ್ಯವಾಗಬೇಕೆಂದು ಮಲಪುರದಲ್ಲಿ ಅಂಗಡಿಯನ್ನು ಕಟ್ಟಿಸಿ ಸಂತೆಯ ವಸಿಗೆಯನ್ನು ಸ್ವಲ್ಪ ಭೂಮಿಯನ್ನು ಸೂರ್ಯನಾರಾಯಣದೇವರಿಗೆ ಬಿಡುತ್ತಾನೆ ಎಂಬ ವಿಷಯವನ್ನು ಉಲ್ಲೇಖಿಸುತ್ತದೆ.

***ಅಮ್ಮಾಜಿ***

ಕ್ರಿ.ಶ. 1540ರ ಹೊಸಪೇಟೆಯ ಕಲ್ಲಹಳ್ಳಿ ಶಾಸನವು ಅಚ್ಯುತದೇವ ಮಹಾರಾಯರು ತಂಮತಾಯಿ ಅಂಮಾಜಿ ಅಂಮ, ತಂದೆ-ನರಸ ನಾಯಕರಿಗೆ ಪುಣ್ಯವಾಗಬೇಕೆಂದು ಜಂಬುನಾಥ ದೇವರ ಅಮೃತಪಡಿ ಮುಂತಾದವುಗಳಿಗೆ ತಿರುಮಲದೇವಿ ಅಂಮನವರ ಪಟ್ಟಣಕ್ಕೆ ಸಲ್ಲುವ ಕಲ್ಲಹಳ್ಳಿಯನ್ನು ದಾನ ನೀಡಿದ ಉಲ್ಲೇಖವಿದೆ.

***ವರದಾಜಿದೇವಿ***

ಕ್ರಿ.ಶ.1532ರ ಹಂಪಿಯ ಶಾಸನದಲ್ಲಿ ವರದಾಜಿದೇವಿ ಅಮ್ಮನು ದೇವರ ಅವಸರದ ಕಾರ್ಯ 1ಕ್ಕೆ 1 ದಿನಕ್ಕೆ 9 ಚಕ್ರ ಗದ್ಯಾಣದ ಲೆಕ್ಕದಲ್ಲಿ ವರ್ಷಕ್ಕೆ 3240 ಚಕ್ರಗದ್ಯಾಣವನ್ನೂ, ಅಚ್ಯುತದೇವರಾಯನು, ಬಾಲಕೃಷ್ಣ ದೇವಾಲಯಕ್ಕೆ ನೀಡಿದ್ದ ದೇವರ ಚಿನ್ನದ ಉಯ್ಯಾಲೆಯ ತಿರುನಾಳು ಒಂದಕ್ಕೆ 300 ಚಕ್ರ ಗದ್ಯಾಣ, ಕೊಡೆತಿರುನಾಳು ಒಂದಕ್ಕೆ 300 ಚಕ್ರಗದ್ಯಾಣ ಸೇರಿ ಒಟ್ಟು 3840 ಚಕ್ರ ಗದ್ಯಾಣಗಳನ್ನು ನೀಡಿ ಈ ಪೂಜಾಪ್ರಸಾದವನ್ನು ಪಂಚನಾಥ, ಪರದೇಶಿ ಶ್ರೀವೈಷ್ಣವರಿಗೆ ನೀಡಬೇಕೆಂದು ತಿಳಿಸಿರುತ್ತಾಳೆ.

***ತಿರುಮಲಮ್ಮ***

ಕ್ರಿ.ಶ.1533ರ ಹಂಪಿಯ ಶಾಸನದಲ್ಲಿ ಅಚ್ಯುತದೇವರಾಯನು ಆಳುತ್ತಿದ್ದಾಗ ವಿಠಲೇಶ್ವರ ಸನ್ನಿಧಿಯಲ್ಲಿ ಅವನು ಮಾಡಿದ ಸುವರ್ಣ ಮೇರುದಾನದ ಬಗ್ಗೆ ವೋದುವ ತಿರುಮಲಮ್ಮನು ಶ್ಲೋಕವನ್ನು ರಚಿಸಿದ್ದಾಳೆ.

ಕ್ರಿ.ಶ.1533ರ ಹಂಪಿಯ ಶಾಸನದಲ್ಲಿ ಅಚ್ಯುತದೇವರಾಯನು ಆಳುತ್ತಿದ್ದಾಗ ವಿಠಲೇಶ್ವರನ ಸನ್ನಿಧಿಯಲ್ಲಿ ಅವನು ಮಾಡಿದ ಸುವರ್ಣಮೇರುವಿನ ಬಗ್ಗೆ ವೋದುವ ತಿರುಮಲಮ್ಮನು ಶ್ಲೋಕವನ್ನು ರಚಿಸಿದ್ದು ಅದೇ ಪಾಠವನ್ನು ಸಂಸ್ಕೃತ ಶ್ಲೋಕದಲ್ಲಿ ಹೇಳಲಾಗಿದೆ.

***ಲಕ್ಕರಿಶಮ್ಮ***

ಕ್ರಿ.ಶ.1539ರ ತಿಮ್ಮಲಾಪುರದ ಶಾಸನದಲ್ಲಿ ಬಯಕಾರ ರಾಮಪ್ಪಯ್ಯನು ತನ್ನ ತಂದೆ ಹಿರಿಯ ತಿಮ್ಮರಸಯ್ಯನಿಗೆ, ತಾಯಿ ಹಿರಿಯ ಲಕ್ಕರಿಶಮ್ಮನವರಿಗೆ ಪುಣ್ಯವಾಗಬೇಕೆಂದು ಗೋಪಿನಾಥರ ದೇವರ ಗುಡಿ ಕಟ್ಟಿಸಿದ ಉಲ್ಲೇಖವಿದೆ.

**ಅಮ್ಮಾಜಮ್ಮ**

ಕ್ರಿ.ಶ,1539ರ ತಿಮ್ಮಲಾಪುರದ ಶಾಸನವು ಬಯಕಾರ ರಾಮಪ್ಪಯ್ಯನು ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಂಮಾಜಮ್ಮ, ತನ್ನ ತಮ್ಮ ಕೃಷ್ಣಪ್ಪನಿಗೆ ಪುಣ್ಯವಾಗಬೇಕೆಂದು ಬಾಚೇಶ್ವರ, ಅಮ್ಮೇಶ್ವರ, ಕೃಷ್ಣೇಶ್ವರ ದೇವಾಲಯವನ್ನು ಕಟ್ಟಿಸಿದ. ಈ ಶಾಸನ ಮುಂದುವರೆದು ಬಯಕಾರ ರಾಮಪ್ಪನು ಅಚ್ಚುತದೇವರಾಯನ ಕೈ ಕೆಳಗಿನ ಅಧಿಕಾರಿಯಾಗಿದ್ದು 16 ಕೆರೆಗಳನ್ನು ಕಟ್ಟಿಸಿ ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕಟ್ಟಿಸಿದ. ಇದರಲ್ಲಿ ರಾಮಪ್ಪಯ್ಯನ ವಂಶಾವಳಿ ಹಾಗೂ ಧಾರ್ಮಿಕ ಕಾರ್ಯಗಳನ್ನು ತಿಳಿಸಿದೆ.

***ವೀರಮ್ಮ***

ಕ್ರಿ.ಶ.1559ರ ಹಾರುವನಹಳ್ಳಿ ಶಾಸನದಲ್ಲಿ ತಿಮ್ಮಾಪುರದ ಪಾರುಪತ್ಯೆಗಾರನಾದ ನಮಶಿವಾಯ ಎಂಬುವವನು ಬಯಕಾರ ರಾಮಪ್ಪಯ್ಯನ ಪತ್ನಿ ವೀರಮಂಮನ ಹೆಸರಿನಲ್ಲಿ ಬಾವಿ, ಮಂಟಪ, ಹನುಮಂತ ದೇವರ ಪ್ರತಿಷ್ಠೆ ಅರವಟಿಗೆ ಮತ್ತು ಸಾಲುತೋಪನ್ನು ಮಾಡಿಸುತ್ತಾನೆ.

ಕ್ರಿ.ಶ.1559ರ ಚಿಲಕನಹಟ್ಟಿ ಶಾಸನವು ಬಯಕಾರ ರಾಮಪ್ಪಯ್ಯನ ಪತ್ನಿಯಾದ ವೀರಮ್ಮನು ತನ್ನ ಹೆಸರಿನಲ್ಲಿ ತೋಪೊಂದನು ನಡೆಸಿದಳು ಎಂಬ ವಿಷಯವಿದೆ.

***ಲಕ್ಕರಿಸಮ್ಮ***

ಕ್ರಿ.ಶ.1544ರ ಮಗಿಮಾವಿನಹಳ್ಳಿ ಶಾಸನದಲ್ಲಿ ಬಯಕಾರ ರಾಮಪ್ಪಯ್ಯ ತಮ್ಮ ಮಗಳು ಲಖರಿಸಮ್ಮನಿಗೆ ಪುಣ್ಯವಾಗಲಿಯೆಂದು ಚಿಕ್ಕಲಕ್ಕ ಸಮುದ್ರದ ಕೆರೆಯನ್ನು ಕಟ್ಟಿಸಿದ ವಿವರವಿದೆ.

ಕ್ರಿ.ಶ.1559ರ ಚಿಲಕನಹಟ್ಟಿ ಶಾಸನದಲ್ಲಿ ಬಯಕಾರ ರಾಮಪ್ಪಯ್ಯನು ತನ್ನ ಮಗಳು ಲಖರಿಸಂಮನಿಗೆ ಪುಣ್ಯವಾಗಲಿಯೆಂದು ಮಂಟಪ, ಬಾವಿ, ಅರವಟಿಗೆಗಳನ್ನು ಮಾಡಿಸುತ್ತಾನೆ. ಜೊತೆಗೆ ಲಕ್ಷ್ಮೀದೇವಿಯನ್ನು ಪ್ರತಿಷ್ಠಾಪಿಸುತ್ತಾನೆ.

***ಅಚ್ಯುತಮ್ಮ***

ಕ್ರಿ.ಶ.1556ರ ಕೂಡ್ಲಿಗಿ ತಾಲೂಕಿನ ಹುಲಿಗುಂಟ ಗ್ರಾಮದ ಶಾಸನವು ಬಯಕಾರ ರಾಮಪ್ಪಯ್ಯನು ತನ್ನ ಮಗಳು ಅಚ್ಯುತಮ್ಮನ ನೆನಪಿನಲ್ಲಿ ಕಟ್ಟಿಸಿದ ಬಾಲಕೃಷ್ಣ ದೇವರಗುಡಿ ಮತ್ತು ಅಚ್ಯುತಂಮಾಪುರ ಗ್ರಾಮದ ಉಲ್ಲೇಖವಿದೆ.

***ಗೋಪಮ್ಮ***

ಕ್ರಿ.ಶ.1553ರ ತಿಮ್ಮಲಾಪುರ ಶಾಸನದಲ್ಲಿ ಹೂಂಟ ಲಕ್ಷ್ಮಣಭಟ್ಟರ ಹೆಂಡತಿ ಗೋಪಮ್ಮ ಕಾಶಿವಿಶ್ವನಾಥ ದೇವರ ಗುಡಿ ಕಟ್ಟಿಸುತ್ತಾಳೆ.

***ಮಾಟಮ್ಮ***

ಹಂಪಿಯ ವಿರೂಪಾಕ್ಷ ದೇವಾಲಯದ ವಾಯುವ್ಯಕ್ಕೆ ನದಿಯ ದಂಡೆಯಲ್ಲಿ ಹಳೆಯ ಸ್ನಾನಘಟ್ಟದ ಹತ್ತಿರ ಮಂಟಪದ ಎದುರು ಬಂಡೆಯ ಮೇಲೆ ಇರುವ ಶಾಸನ ಒಂದರಲ್ಲಿ ಬೋಖಿಶೆಟ್ಟಿಯ ಮಗ ಸಿರಿಗಿಸೆಟ್ಟಿಯ ಪತ್ನಿ ಮಾಟಮ್ಮ ಹಂಪಿಯಲ್ಲಿ ಉಯ್ಯಾಲೆ ಕಂಬಗಳನ್ನು ಮಾಡಿಸಿದಂತೆ ಹೇಳಿದೆ.

***ಅಂಣಲದೇವಿ***

ಹಂಪಿಯ ಕಾಲಮಾನ ಉಲ್ಲೇಖವಿಲ್ಲದ ಶಾಸನದಲ್ಲಿ ಅಂಣಲದೇವಿಯರು 571 ತೂಕದ ಹರಿವಾಣ, ಬಂಣ ಹದಿಮೂರು, ನಾಲ್ಕು ಕಮ್ಮ ಚಿನ್ನದ ಬಟ್ಟಲನ್ನು ರಾಮಚಂದ್ರ ದೇವರಿಗೆ ಕೊಟ್ಟಿದ್ದುದನ್ನು ದಾಖಲಿಸಿದೆ.

***ಓಬುಲಮ್ಮ***

ಕಾಲಮಾನ ಉಲ್ಲೇಖವಿಲ್ಲದ ಹಂಪಿಯ ಶಾಸನವೊಂದರಲ್ಲಿ ಓಭುಲಮ್ಮ ಎಂಬುವಳು ಪೆರುಮಾಳ ದೇವರಿಗೆ ಮಾಡಿಸಿದ ತಿರುವಪ ಸೇವೆ ಎಂಬ ಉಲ್ಲೇಖವಿದೆ.

**ಭಯಿರಾಯಿ**

ಕ್ರಿ.ಶ.1558ರ ಶಾಸನದಲ್ಲಿ ಸೋಮಯೆನಾಯಕನ ಮಗ ಬುಳಪ ಮತ್ತು ಅವನ ಪತ್ನಿ ಭಯಿರಾಯಿಯು ಸುಗನಹಳ್ಳಿಯ ಜಂಗಮನಾಥ ಸೋಮಯಿದೇವ ಅಯ್ಯನಿಗೆ ಬಾಗಿಲ ಒಳಗಡೆ ನಿವೇಶನವನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ.

**ವೀರಾಯಮ್ಮ (ವೀರಮ್ಮ)**

ಹಂಪಿಯ ವಿರೂಪಾಕ್ಷ ದೇವಾಲಯದ ಹಿಂಬದಿ ಮಾವಿನ ತೋಪಿನ ದಾರಿ ಬಳಿಯ ಮಂಟಪದ ಹಿಂಬದಿಯ ಮಾಸ್ತಿಕಲ್ಲಿನಲ್ಲಿ ವೀರಣ್ಣನ ಮಗಳು ವೀರಾಯಮನ ಉಲ್ಲೇಖವಿದೆ. ಲಿಪಿಯು ಕ್ರಿಸ್ತಶಕ ಸುಮಾರ 15ನೇ ಶತಮಾನಕ್ಕೆ ಸೇರುತ್ತದೆ.

ಮತ್ತೊಂದು ಶಾಸನವು ವೀರಮ್ಮನು ಮಂಟಪವನ್ನು ಪ್ರತಿಷ್ಠಾಪಿಸಿದಂತೆ ತಿಳಿಯುತ್ತದೆ.

***ಉಮಾದೇವಿ***

ಕಾಲದ ಉಲ್ಲೇಖವಿಲ್ಲದ ಹಂಪಿಯ ಈ ಶಾಸನದಲ್ಲಿ ಪಾಪವಿನಾಶಿ ತೀರ್ಥವನ್ನು ಉಲ್ಲೇಖಿಸುತ್ತದೆ. ಈ ತೀರ್ಥವನ್ನು ಹೆಗ್ಗಡತಿ ಉಮಾದೇವಿ ಜೀರ್ಣೋದ್ಧಾರ ಮಾಡಿಸಿದಂತೆ ತಿಳಿಸುತ್ತದೆ.

***ರಾಮಾಯಿ***

ಹಂಪಿಯ ಮತಂಗಪರ್ವತದಲ್ಲಿರುವ ಶಾಸನದಲ್ಲಿ ಕಾಲದ ಉಲ್ಲೇಖ ಸ್ಪಷ್ಟವಾಗಿಲ್ಲ. ಮಟ್ಟರಸ ಮತ್ತು ಮಂಗರಾಯರ ಮಗಳಾದ ರಾಮಾಯಿಯು ವಿರೂಪಾಕ್ಷದೇವರ ಕಳಸವನ್ನು ಕಂಡು ಕೃತಾರ್ಥಳಾದಳೆಂದಿದೆ. ಶಾಸನ ಮುಂದುವರೆದು ರಾಯಣ್ಣ, ಧೂಭಪ್ಪನ ಮಗ ಮಯನಪ್ಪ, ಮಯಿಲಪ್ಪನ ತಾಯಿ ಸಾತಾಯಿ, ಮಲ್ಲಪ್ಪ, ಮಾಯಕರ ಮಕ್ಕಳಾದ ಕಲ್ಲಾಯಿ, ನಿಟ್ಟೂರ ದೇವಣ್ಣ ವಿರೂಪಾಕ್ಷ ದೇವರ ಕಳಸವನ್ನು ಕಂಡು ಕೃತಾರ್ಥರಾದರೆಂದಿದೆ.

***ಓಬಾಂಬಿಕ***

ಕಾಲದ ಉಲ್ಲೇಖ ತ್ರುಟಿತಗೊಂಡಿದ್ದು ಶಾಸನದಲ್ಲಿ ಓಭಾಂಬಿಕಾ ಮತ್ತು ನರಸನ ಮಗನಾದ ಅಚ್ಚುತರಾಯನ ಉಲ್ಲೇಖವಿದೆ. ಇದರಲ್ಲಿ ಅಚ್ಯುತರಾಯನನ್ನು ಬಹಳವಾಗಿ ಹೊಗಳಿದೆ.

***ಪಾರ್ವತಿ ಅಮ್ಮ***

ಕ್ರಿ.ಶ.1516ರ ಹಡಗಲಿ ತಾಲೂಕಿನ ಸೋಗಿ ಗ್ರಾಮದ ಶಾಸನದಲ್ಲಿ ಕೃಷ್ಣರಾಯ ಮಹಾರಾಯನ ಆಳ್ವಿಕೆಯಲ್ಲಿ ಅವನ ಅಧಿಕಾರಿ ಇಮ್ಮಡಿ ಬಸವಪ್ಪ ಒಡೆಯನ ತಾಯಿ ಪಾರ್ವತಿ ಅಮ್ಮನ ಆದೇಶದಂತೆ ಕೊಟ್ಟೂರಿನ ಪ್ರಧಾನ ಅರುಹತಿಮ್ಮಣ್ಣ ನಾಯಕನು ಡಣಾಯಕಪುರ ಗ್ರಾಮವನ್ನು ಸೋಗೆಯ ಧರ್ಮದ ಏತಕ್ಕಾಗಿ ತನ್ನ ಅರಸನಿಗೆ ಪುಣ್ಯವಾಗಲಿಯೆಂದು ದಾನ ಮಾಡಿದನು. ಏತದ ವೆಚ್ಚದಲ್ಲಿ ಮಿಕ್ಕಿದ ಹಣವನ್ನು ಸೋಗೆಯ ಕಲಿನಾಥದೇವರ ಸೇವಾಕಾರ್ಯಗಳಿಗಾಗಿ ಬಳಸುವುದು ಎಂದಿದೆ.

***ಲಿಂಗಮ್ಮ***

ಕ್ರಿ.ಶ.1550ರ ಬಾಗಳಿಯ ಶಾಸನದಲ್ಲಿ ವಿದ್ಯಾನಗರಿಯಲ್ಲಿ ಸದಾಶಿವರಾಯನು ಆಳುತ್ತಿದ್ದಾಗ ಹಡಪದ ಬಯ್ಯಪನಾಯಕನ ಮಗ ಕೃಷ್ಣಪ್ಪನಾಯಕನು ಕೋಗಳಿಯ ಬಳಿಯ ಕೊಟ್ಟೂರನ್ನೂ, 32000ದ ಸೀಮೆಯನ್ನೂ ಪಾಲಿಸುತ್ತಿದ್ದಾಗ, ಇವನ ಸಾಮಂತ ಹಳವಿನಾಯಕನು ಬಾಗುಳಿಯನ್ನು ಆಳುತ್ತಿದ್ದಾಗ ಬಾಗುಳಿಯ ಪಟ್ಟಣಸ್ವಾಮಿಯದ ಲಕ್ಕಿಶೆಟ್ಟಿಯ ಹೆಂಡತಿ ಲಿಂಗಮ್ಮನು ತನ್ನ ಮಗ ಲಿಂಗಯ್ಯನಿಗೆ ಶುಭವಾಗಲೆಂದು ಕಲಿದೇವರಿಗೆ ರಾತ್ರಿ ನೈವೇದ್ಯಕ್ಕೆಂದು ಸ್ಥಾನಿಕ ದೇವರಾಸಿಜೀಯನ ಕೈಯಲ್ಲಿ ದಾನ ನೀಡಿದ ವಿಷಯವಿದೆ.

***ಪಾತ್ರದ ಬೆಂಪಾಯಿ***

ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿರುವ ಶಾಸನದಲ್ಲಿ ಕಾಲಮಾನದ ಉಲ್ಲೇಖ ನಷ್ಟವಾಗಿದ್ದು, ಶಾಸನದಲ್ಲಿ ಸದಾಶಿವರಾಯನ ಆಳ್ವಿಕೆಯ ಉಲ್ಲೇಖವಿದ್ದು ಪಾತ್ರದ ಬೊಂಪಾಯಿ ಎಂಬವಳು ಬಾಲಕೃಷ್ಣದೇವರ ಏಕಾಂತದ ಅವಸರದ ಪರಮಾನ್ನದ ನೈವೇದ್ಯಕ್ಕೆ 3 ಕೊಳಗ ಹೊಲವನ್ನು ಬಿಡುತ್ತಾಳೆ. ಈ ಹೊಲವನ್ನು ಬೆಂಪಾಯಿಗೆ ಕರಣೀಕ ಗಣಪತಿದೇವನು ನೀಡಿದನೆಚಿದೂ, ಇದು ತಿರುಮಲದೇವಿ ಅಮ್ಮನವರ ಪಟ್ಟಣದ ಸಮೀಪದಲ್ಲಿದೆ ಎಂದು ಶಾಸನ ತಿಳಿಸುತ್ತದೆ.

**ಪಾಳೆಯಗಾರರ ಕಾಲದ ಶಾಸನಗಳಲ್ಲಿ ಸ್ತ್ರೀಯರು**

***ಹೊನ್ನ ನಾಗತಿ***

ಕ್ರಿ.ಶ.1653ರ ಉಚ್ಚಂಗಿದುರ್ಗ ಶಾಸನದಲ್ಲಿ ದಾದಿಯನಾಯಕನ ಹೆಂಡತಿ ಹೊನ್ನನಾಗತಿ ಗಂಟೆ ಮಾಡಿಸಿದ್ದು ಅದು ನಂತರ ಒಡೆದು ಹೋದಾಗ ಕುಮಾರ ರಂಗರಾಜನಾಯಕ (ಅವನ ಮಗ) ಕುಮಾರ ಬಸಪ್ಪ ನಾಯಕ (ಅವನ ಮಗ) ಕುಮಾರ ಮುಮ್ಮಡಿ ಬಸಪ್ಪನಾಯಕನು ಗಂಟೆ ಮಾಡಿಸುತ್ತಾನೆ.

***ತಿಮ್ಮಮಾಜಿ***

ಕ್ರಿ.ಶ.1710ರ ಬನ್ನಿಕಲ್ಲು ಶಾಸನದಲ್ಲಿ ಬಾಗಳಿ ತಿಂಮಂಮ್ಮಾಜಿಯ ಬನ್ನಿಕಲ್ಲ ಬಸಯ್ಯನ ಮಗ ಬಸಯ್ಯನಿಗೆ ಭೂದಾನ ನೀಡಿದ ಎಂಬ ವಿಷಯವನ್ನು ಉಲ್ಲೇಖಿಸುತ್ತದೆ.

***ಹರಿಯಾಮ್ಮಜಿ***

ಕ್ರಿ.ಶ.1712ರ ಕೂಡ್ಲಿಗಿ ತಾಲೂಕಿನ ಹರಾಳು ಗ್ರಾಮದ ಶಾಸನವು ಬಾಗಳಿಯ ಹರಿಯಮ್ಮಾಜಿಯು ಕೊಟ್ಟೂರು ಬಸವೇಶ್ವರ ದೇವರಿಗೆ ಎಥಿನಹಾಳ ಗ್ರಾಮವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

***ಹಂಡೆ ನೀಲಮ್ಮ ರಾಮಪ್ಪ ನಾಯಕಿತಿ***

ಕ್ರಿ.ಶ.1733ರ ಹೊಸಪೇಟೆ ಕೊಟ್ಟೂರು ಸ್ವಾಮಿ ಮಠದ ಶಾಸನದಲ್ಲಿ ಹಂಡೆ ನೀಲಮ್ಮ ರಾಮಪ್ಪ ನಾಯಕಿತಿಯು ಬಳ್ಳಾರಿಯ ಮಹಮಹಂತಸ್ವಾಮಿಗೆ ವುಳೇನೂರು ಗ್ರಾಮವನ್ನು ತನ್ನ ಹಿರಿಯರಿಗೆ ಸುಕೃತವಾಗಬೇಕೆಂದು ಆ ಮಠದಲ್ಲಿ ದಾಸೋಹ ನಡೆಸಲು ನೀಡುತ್ತಾಳೆ.

ಈ ಎಲ್ಲಾ ಶಾಸನಗಳನ್ನು ಗಮಿಸಿದಾಗ ಸ್ತ್ರೀಯರು ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅನೇಕ ರೀತಿಯ ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಪುರುಷನ ಸಾಧನೆಗಳ ವರ್ಣನೆಯಂತೆ ಸ್ತ್ರೀಯರ ಸಾಧನೆಗಳನ್ನು ವಿವರಿಸಿರುವುದಿಲ್ಲ. ಸ್ತ್ರೀಯರ ಕುರಿತಂತೆ ಅವರ ಮಾಹಿತಿಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುವುದಿಲ್ಲ. ಆದರೂ ಸಹ ಈ ಜಿಲ್ಲೆಯಲ್ಲಿ ರಾಜಮನೆತನದ ಸ್ತ್ರೀಯರಿಂದ ಸಾಮಾನ್ಯ ವರ್ಗದ ಸ್ತ್ರೀಯರು ಸಹ ಹಲವಾರು ದಾನ–ಧರ್ಮಗಳು ಹಾಗೂ ಸ್ಮಾರಕಗಳ ನಿರ್ಮಾಣ ಮಾಡಿದ್ದಾರೆ. ರಾಜರು, ಮಹಾಮಂಡಲೇಶ್ವರರು ಹಾಗೂ ಅಧಿಕಾರಿ ವರ್ಗದವರು ತಮ್ಮ ತಾಯಿ, ಪತ್ನಿ ಹಾಗೂ ಮಕ್ಕಳ ಹೆಸರಿನಲ್ಲಿ ಹಲವಾರು ದಾನ–ಧರ್ಮ ಹಾಗೂ ಸ್ಮಾರಕಗಳನ್ನು ನಿರ್ಮಿಸಿದ್ದಾರೆ.

ಇಷ್ಟೇ ಅಲ್ಲದೆ ಶಾಸನ ಹೊರತಾದ ಸಾಕಷ್ಟು ಸ್ತ್ರೀಯರು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಅಂತಹ ಕುರುಹುಗಳೆಂದರೆ ಶಿಲ್ಪಗಳು ಹಾಗೂ ಸ್ಮಾರಕ ಶಿಲ್ಪಗಳು. ಉದಾಹರಣೆಗೆ ಹಗರಿಬೊಮ್ಮನಹಳ್ಳಿ ತಾಲೂಕಿನ ಮೋರಿಗೆರೆಯಲ್ಲಿರುವ ಮಹಿಳೆಯ ತುರುಗೋಳ್ ವೀರಗಲ್ಲು. ಈ ವೀರಗಲ್ಲಿನಲ್ಲಿ ಮಹಿಳೆಯು ತುರುಗಳ (ಹಸುಗಳ) ರಕ್ಷಣೆಗಾಗಿ ಶತ್ರುಗಳ ವಿರುದ್ಧ ಹೋರಾಡಿದ ಚಿತ್ರಣವಿದೆ. ಇಂತಹ ಅನೇಕ ಸಾಹಸಿ ಮಹಿಳೆಯರನ್ನು ಸೂಚಿಸುವ ಶಿಲ್ಪಗಳು ಹಾಗೂ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ.

**ಪರಾಮರ್ಶನ/ಆಕರ ಗ್ರಂಥಗಳು**


- ಚನ್ನಕ್ಕ ಎಲಿಗಾರ. (1990). *ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಚನ್ನಬಸಪ್ಪ ಎಸ್. ಪಾಟೀಲ, ವಿನೋದ ಪಾಟೀಲ.(ಸಂ.). (1997). *ಕರ್ನಾಟಕ ಶಾಸನ ಸಂಪುಟ 2, ಬಳ್ಳಾರಿ ಜಿಲ್ಲೆಯ ಶಾಸನಗಳು.* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
- ದೇವರಕೊಂಡಾ ರೆಡ್ಡಿ. (ಸಂ.). (1998). *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1, ಬಳ್ಳಾರಿ ಜಿಲ್ಲೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ದೇವರಕೊಂಡಾ ರೆಡ್ಡಿ. (ಸಂ.). (2000). *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 3, ಹಂಪಿ ಶಾಸನಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವಾಸುದೇವ ಬಡಿಗೇರ. (2012). ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.